ಶ್ರೀ ಎ. ಲಕ್ಷ್ಮೀಸಾಗರ್.—ಡ್ರಾಟ್ ರಿಲೀಫ್‌ಗೆ ಎಂದು ಕೊಟ್ಟಿದ್ದಾರೆ. ಆದರಲ್ಲಿ ೨೦ ಲಕ್ಷ ರೂಪಾಯಿಗಳನ್ನು ಬಾವಿಗಳಿಗಾಗಿ ಖರ್ಚು ಮಾಡಿದ್ದೇವೆ.

ಶ್ರೀ ಕೆ. ಜೆ. ಜಾರ್ಜ್.—ಪ್ರಧಾನಿಯವರು ಡ್ರಾಟ್ ರಿಲೀಫ್‌ಗೆ ಎಂದು ಕೊಟ್ಟು ಎಷ್ಟು ಕೊಳವೆ ಬಾವಿಗಳಿಗಾಗಿ ಖರ್ಚು ಮಾಡಿ ಎಂದು ಹೇಳಿದ್ದಾರೆ, ೨೦ ಲಕ್ಷ ಮಾತ್ರವೇ ?

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯರು ಹೇಳಿದ ಅಭಿಪ್ರಾಯಗಳನ್ನು ಗಮನದಲ್ಲಿಟ್ಟುಕೊಂಡು ಬೆಂಗಳೂರಿನಲ್ಲಿ ಕೊಳೆಚೆ ಪ್ರದೇಶಗಳಲ್ಲಿ ಬಾವಿಗಳನ್ನು ಕೊರೆಯಲು ಖರ್ಚು ಮಾಡಿದ್ದೇವೆ. ಅದು ೨೦ ಲಕ್ಷ ರೂಪಾಯಿಗಳು. ಅದರ ಜೊತೆಗೆ ಬೇರೆ ಹಣವನ್ನು ಕೂಡ ಖರ್ಚು ಮಾಡಿದ್ದೇವೆ.

ಶ್ರೀ ಕೆ. ಜೆ. ಜಾರ್ಜ್.—ಬೋರ್‌ವೆಲ್ ತೆಗೆಯುವುದನ್ನು ಸ್ಟಾಪ್ ಮಾಡಿಬಿಟ್ಟಿದ್ದಾರೆ. ಸರ್ಕಾರ ದವರು ಈಗ ಮತ್ತೆ ಹಣ ಕೊಟ್ಟು ಬೋರ್‌ವೆಲ್ ಕೊರೆತವನ್ನು ಶುರು ಮಾಡಬೇಕು.

ಶ್ರೀ ಎ. ಲಕ್ಷ್ಮೀಸಾಗರ್.—ಶಾಸಕರನ್ನು ಕೇಳಿಯೇ ನಾವು ಬೋರ್‌ವೆಲ್‌ಗಳ ಸಂಖ್ಯೆ ನಿರ್ಧರಿಸಿರುವುದು. —ಈಗ ಮತ್ತೆ ಬೇಕೆನಿಸಿದರೆ ಅವರು ಪಟ್ಟಿ ಕೊಡಲಿ ಮಾಡಿಸೋಣ.

ಧಾರವಾಡ ಹುಬ್ಬಳ್ಳಿ ಮಹಾನಗರದಲ್ಲಿ ನಿವೇಶನಗಳ ಹಂಚಿಕೆಯ ಬಗ್ಗೆ

೧೭೩. (೪೬೯ ಸಿ) ಶ್ರೀಮಾನ್ ಚಂದ್ರಕಾಂತ ಬೆಲ್ಲದ (ಧಾರವಾಡ).—ಮಾನ್ಯ ಕಾನೂನು ಸಂಸದೀಯ ವ್ಯವಹಾರ, ಆಹಾರ ಮತ್ತು ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಧಾರವಾಡ ಹುಬ್ಬಳ್ಳಿ ಮಹಾ ನಗರಸಭೆಯ ಸರಹದ್ದಿನಲ್ಲಿ ನಗರಾಭಿವೃದ್ಧಿ ಸಮಿತಿಯಿಂದ ೧೯೮೫-೮೬, ೧೯೮೬-೮೭ ಮತ್ತು ೧೯೮೭-೮೮ನೇ ಸಾಲಿನಲ್ಲಿ ಹಂಚಿರುವ ನಿವೇಶನಗಳ ಸಂಖ್ಯೆ ಎಷ್ಟು?

ಆ) ನಿವೇಶನಗಳ ಹಂಚಿಕೆಯಲ್ಲಿ ಅನುಸರಿಸುತ್ತಿರುವ ವಿಧಾನಗಳು ಯಾವುವು ?

ಇ) ಧಾರವಾಡ-ಹುಬ್ಬಳ್ಳಿ ಮಹಾ ನಗರಸಭೆಯ ಸರಹದ್ದಿನಲ್ಲಿ ಬೇಕಾಗಿರುವ ನಿವೇಶನಗಳ ಸಂಖ್ಯೆ ಎಷ್ಟು ಹಾಗೂ ಅದರ ಬಗ್ಗೆ ಸರಕಾರದವರು ಯಾವ ಯೋಜನೆಯನ್ನು ಹಾಕಿಕೊಂಡಿದ್ದಾರೆ ?

ಪ್ರೊ॥ ಎ. ಲಕ್ಷ್ಮೀಸಾಗರ್ (ಸಂಸದೀಯ ವ್ಯವಹಾರ, ಆಹಾರ ಸರಬರಾಜು ಮತ್ತು ನಗರಾಭಿವೃದ್ಧಿ ಸಚಿವರು).—

ಅ) ೧೯೮೫-೮೬ ೧೨೮
೧೯೮೬-೮೭ ೧೬೨
೧೯೮೭-೮೮ ೪೧೩

ಆ) ಕರ್ನಾಟಕ ನಗರಾಭಿವೃದ್ಧಿ ಮಂಡಳಿಗಳ ನಿಯಮಾವಳಿಗಳು ೧೯೭೬ರ ಆಧಾರದ ಮೇಲೆ.

ಇ) ಸುಮಾರು ೧೦,೦೦೦ ನಿವೇಶನಗಳನ್ನು ಹುಬ್ಬಳ್ಳಿ-ಧಾರವಾಡ ನಗರಗಳಿಗೆ ಸದ್ಯದಲ್ಲಿ ಒದಗಿಸುವ ಅಗತ್ಯ ಇದೆ ಎಂದು ಅಂದಾಜು ಮಾಡಲಾಗಿದೆ.

ಈ ಬಗ್ಗೆ ಯೋಜನೆಗಳನ್ನು ತಯಾರು ಮಾಡುವ ಕೆಲಸ ಅಭಿವೃದ್ಧಿ ಮಂಡಳಿಯದು. ಅವರೂ ಹುಬ್ಬಳ್ಳಿ ತಾಲ್ಲೂಕ ರಾಯನಾಳ ಗ್ರಾಮದ ಆ.ಸ.ಸಂ. ೮೮ : ೧ ರಲ್ಲಿ ೧೪೧ ಎ-೧೦ ಗುಂ. ಸರ್ಕಾರಿ ಜಮೀನನ್ನು ಮಂಜೂರು ಮಾಡುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ಚಂದ್ರಕಾಂತ ಬೆಲ್ಲದ.—ಅಧ್ಯಕ್ಷರೇ, ನಿವೇಶನಗಳ ಹಂಚಿಕೆಯಲ್ಲಿ ಯಾವ ವಿಧಾನವನ್ನು ಇವರು ಅನುಸರಿಸಿದ್ದಾರೆ ? ಧಾರವಾಡ ನಗರದಲ್ಲಿ ನಿವೇಶ ಹಂಚಿಕೆಗೆಂದು ಈಗಾಗಲೇ ಯಾವ ಯಾವ ಬಡಾವಣೆಗಾದರೂ ಭೂಮಿಯನ್ನು ಸರ್ಕಾರ ವಶಪಡಿಸಿಕೊಂಡಿದೆಯೇ ? ಮತ್ತು ಇಲ್ಲಿಯವರೆಗೆ ಎಷ್ಟು ನಿವೇಶನಗಳನ್ನು ಧಾರವಾಡದಲ್ಲಿ ಹಂಚಲಾಗಿದೆ ?

ಶ್ರೀ ಎ. ಲಕ್ಷ್ಮೀಸಾಗರ್.—ಧಾರವಾಡದ ಡಿಮಿಯಾಂಡ್ ಸರ್ವೆ ಮಾಡಿಸಿ ಅದರ ಆಧಾರದ ಮೇಲೆ ನಿವೇಶನ ಕೊಟ್ಟಿದ್ದೇವೆ. ಅದು ಸಾಲದೆಂದು ಕಂಡು ಬಂದು ಮತ್ತೆ ೧೦ ಸಾವಿರ ನಿವೇಶನ ಹಂಚಲು ಮತ್ತೆ ಜಮೀನು ಪಡೆಯುವ ಪ್ರಯತ್ನವನ್ನು ಸರ್ಕಾರ ಮಾಡುತ್ತಿದೆ ಎನ್ನುವುದನ್ನು ಉತ್ತರದಲ್ಲಿ

ಹೇಳಿದ್ದೇನೆ ನಿವೇಶನ ಪಂಚಿಕೆಯನ್ನು ಕರ್ನಾಟಕ ಇಂಪ್ರೂವ್‌ಮೆಂಟ್ ಬೋರ್ಡ್ ಅಕ್ಟ್‌ನಡಿಯಲ್ಲಿ ಸರ್ಕಾರ ಮಾಡಿರುವ ರೂಲ್ಸ್ ಪ್ರಕಾರ ಮಾಡಲಾಗಿದೆ, ಬೇಕಾದಲೆ ಅದರ ಕಾಪಿಯನ್ನು ತಮಗೆ ಕಳಿಸುತ್ತೇನೆ.

ಶ್ರೀ ಚಂದ್ರಕಾಂತ ಬೆಲ್ಲದ.–ಮಹಾನಗರಸಭೆಯವರು ಅನೇಕ ಜನರಿಗೆ ಹಕ್ಕುಪತ್ರ ಕೊಟ್ಟಿದ್ದರೂ ಅವರಿಗೆ ನಿವೇಶನ ಕೊಟ್ಟಿಲ್ಲ. ಅಕ್ರಮವಾಗಿ ನಿವೇಶನ ಮಾಡಿಕೊಂಡಿರುವವರಿಗೆ ಇನ್ನೂ ಹಕ್ಕುಪತ್ರ ಬಂದಿಲ್ಲ. ಇದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಪಿ. ಲಕ್ಷ್ಮೀಸಾಗರ್.–ಅದಕ್ಕೆ ಬೇರೆ ಪ್ರಶ್ನೆ ಹಾಕಿದರೆ ಉತ್ತರಿಸುತ್ತೇನೆ.

ಜಿಲ್ಲಾ ಕೇಂದ್ರಗಳಲ್ಲಿ ಕಟ್ಟಡಗಳ ನಿರ್ಮಾಣ

೧೬೫ (೫೧೨ ಸಿ) ಶ್ರೀ ಎಂ. ಶಿವಣ್ಣ (ಪೆಗ್ಗಡದೇವನ ಕೋಟೆ).–ಮಾನ್ಯ ಗ್ರಾಮೀಣಾಭಿವೃದ್ಧಿ ವಸತಿ ಹಾಗೂ ಪಕ್ಷ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:–

ಅ) ಜಿಲ್ಲೆಯ ಕೇಂದ್ರ ಸ್ಥಳದಲ್ಲಿ ಜಿಲ್ಲಾ ಪರಿಷತ್ತಿನ ಆಡಳಿತ ಅನುಕೂಲಕ್ಕಾಗಿ ಪ್ರತ್ಯೇಕ ಕಟ್ಟಡ ನಿರ್ಮಾಣ ಮಾಡಲಾಗುವುದೇ, ಅದರ ರಚನೆ, ರೇಟಿಗಳೇನು ಹಾಗೂ ಯಾವಾಗ ನಿರ್ಮಾಣ ಮಾಡಲಾಗುವುದು ?

ಆ) ಮಂಡಲ ಪಂಚಾಯಿತಿ ಆಡಳಿತ ಅನುಕೂಲಕ್ಕಾಗಿ ಕಟ್ಟಡ ನಿರ್ಮಿಸಲು ಸರ್ಕಾರ ಉದ್ದೇಶಿಸಿದೆಯೇ ಹಾಗಿದ್ದಲ್ಲಿ ಯಾವಾಗ, ನಿರ್ಮಾಣ ಮಾಡಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ, ವಸತಿ ಹಾಗೂ ಪಕ್ಷ ಮಂತ್ರಿಗಳು).–

ಅ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯಿತಿಗಳ ಪ್ರತ್ಯೇಕ ಕಟ್ಟಡ ನಿರ್ಮಾಣದ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಆ) ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿಗಳ ಕಟ್ಟಡಗಳನ್ನು ಒಂದೇ ಕಟ್ಟಡದಲ್ಲಿ ನಿರ್ಮಿಸುವ ದೃಷ್ಟಿಯಿಂದ ವಾಸ್ತುಶಿಲ್ಪ ಪ್ರವೀಣರನ್ನು ಕರೆಯಿಸಿ ಒಳ್ಳೆಯ ನಕ್ಷೆ ತಯಾರು ಮಾಡಿಸಲು ಸರ್ಕಾರ ಪರಿಶೀಲನೆ ಮಾಡುತ್ತಿದೆ.

ಶ್ರೀ ಎಂ. ಶಿವಣ್ಣ.–ಸ್ವಾಮಿ ಇದೇನು ಪರಿಶೀಲನಾ ಸರ್ಕಾರವೇ ? ಮಾತು ಮಾತಿಗೂ ಹಾಗೆನ್ನುತ್ತಾರೆ. ಬಾಯಿ ಉತ್ತರದಲ್ಲಿ ಕನ್ನಡ ವಿನ್ಯಾಸಕರನ್ನು ಕರೆಯಿಸಿ ವಿಚಾರ ಮಾಡುತ್ತಿದೆ ಎಂದೂ ಕೊಟ್ಟಿರುವ ಲಿಖಿತ ಉತ್ತರದಲ್ಲಿ ಸರ್ಕಾರ ಬರೀ ಸಂಕ್ಷಿಪ್ತವಾಗಿ ಪರಿಶೀಲನೆ ಮಾಡುತ್ತಿದೆ ಎಂದೂ ಹೇಳಿದ್ದಾರೆ. ನಾನು ಕೇಳುವುದಿಷ್ಟೇ: ಅಧ್ಯಕ್ಷ, ಉಪಾಧ್ಯಕ್ಷರ ಚುನಾವಣೆಯಾದ ನಂತರ ಜಿಲ್ಲಾ ಪರಿಷತ್ ಮಂಡಲ ಪಂಚಾಯ್ತಿ ಕಚೇರಿಗಳು ಕೆಲಸ ಮಾಡಬೇಕಾಗುತ್ತದೆ. ಅವರು ಮನೆಗಳ ಚಾವಡಿಯಲ್ಲಿ ಕುಳಿತು ಕೆಲಸ ಮಾಡುವುದಕ್ಕಾಗುವುದಿಲ್ಲ. ಜಿಲ್ಲಾ ಪರಿಷತ್ ಸಭೆಯನ್ನು ಯಾವುದೇ ಒಂದು ಕಟ್ಟಡದಲ್ಲಿ ಕುಳಿತು ಮಾಡುವುದಕ್ಕಾಗುವುದಿಲ್ಲ. ಜಿಲ್ಲಾ ಪರಿಷತ್ತಿನ ಕಟ್ಟಡಗಳು ಯಾವಾಗ ಆಗುತ್ತವೆ ಎಂಬುದನ್ನು ತಾವು ನಿಖರವಾಗಿ ಹೇಳಬೇಕು. ೧೮೦೦ ಕೋಟಿ ರೂಪಾಯಿಗಳನ್ನು ಜಿಲ್ಲಾ ಪರಿಷತ್ತುಗಳಿಗೆ ಕೊಡುತ್ತೇವೆಂದು ಹೇಳಿದ್ದಾರೆ ಇದೂ ಕೊಪ ಆದರಲ್ಲಿ ಸೇರಿದೆಯೇ ? ಜಿಲ್ಲಾ ಪರಿಷತ್ ಸದಸ್ಯರು ಮೀಟಿಂಗ್‌ಗೆ ಬಂದಂತಹ ಸಂದರ್ಭದಲ್ಲಿ ಅವರಿಗೆ ವಸತಿ ಸೌಲಭ್ಯವನ್ನು ಕಲ್ಪಿಸಿಕೊಡುತ್ತೀರಾ ಎಂಬುದನ್ನು ಮಾನ್ಯ ಸಚಿವರು ತಿಳಿಸಬೇಕು.

ಶ್ರೀ ಅಬ್ದುಲ್ ನಜೀರ್ ಸಾಬ್.–ಇನ್ನೂ ಜಿಲ್ಲಾ ಪರಿಷತ್ ಮತ್ತು ಮಂಡಲ ಪಂಚಾಯ್ತಿ ಸಭೆಗಳು ಪ್ರಾರಂಭವಾಗಿಲ್ಲ. ತಿಂಗಳಿಗೆ ೧೦,೦೦೦ ರೂಪಾಯಿಗಳನ್ನು ಕೊಡಬೇಕು ಇಲ್ಲವೇ ಜಾಗವನ್ನು ಮಾಡಬೇಕೆಂದು ಇದ್ದೇವೆ. ಬಹುಪಾಲು ಗ್ರಾಮಗಳಲ್ಲಿ ಗ್ರಾಮ ಕಟ್ಟಡಗಳು ಇರುವುದರಿಂದ ಮಂಡಲ ಪಂಚಾಯಿತಿಗಳಿಗೆ ಕಟ್ಟಡಗಳ ಪ್ರಶ್ನೆ ಬರುವುದಿಲ್ಲ. ಯಾರು ಮೀಟಿಂಗ್‌ಗೆ ಬರುತ್ತಾರೆ ಅವರಿಗೆ ವಸತಿ ಸೌಕರ್ಯ ಇಲ್ಲ ದಿನಭತ್ಯೆ ಕೊಡತಕ್ಕಂತಹ ಅವಕಾಶ ಇದೆ.

ಶ್ರೀ ಎಸ್. ಜಿ. ನಂಜಯ್ಯ ಮಠ.–ಮಾನ್ಯ ಸಚಿವರಲ್ಲಿ ಒಂದು ವಿನಂತಿ ಮಾಡುತ್ತೇನೆ ನೀವು ಈ ಕಟ್ಟಡಗಳನ್ನು ಕಟ್ಟುವಾಗ ಜೊಸ ಮಾದರಿಯನ್ನು ಅನುಸರಿಸದೆ ಹಳೆ ಮಾದರಿಯಲ್ಲಿ. ಅಂದರೆ ವಿಧಾನ ಸೌಧದ ತರಹ ಇಲ್ಲವೇ ಹೈಕೋರ್ಟಿನ ತರಹ ಕಟ್ಟಬೇಕು.